ಸೈಟು ತೊಗೋಬೇಕು? ನೀವು ಈ ಹಿಂಸೆ ಯಾಕೆ ಕೊಡುತ್ತಿದ್ದೀರಿ ಅಂತ ನನಗೆ ಗೊತ್ತಾಗುತ್ತಿಲ್ಲ' ಕೋಪದಿಂದಲೇ ಸಿಡಿದಿದ್ದ ವಿಶ್ವನಾಥ. 'ಅಲ್ಲ ಸಾರ್, ದೊಡ್ಡ ಮನಸ್ಸು ಮಾಡಿ, ನೋಡಿ ಅವರು ಹ್ಯಾಗೆ ಕೂತಲ್ಲೇ ಒಂದು ಸೈಟು ಹೊಡೆದುಕೊಂಡುಬಿಟ್ಟರು, ಜಾಣ ದಂಪತಿ ಅವರು; ನೀವೂ ಜಾಣರಾಗಿ' ಎಂದ ಆ ಯುವಕ. ಜಾಣತನದ ಸುದ್ದಿ ಬಂದದ್ದೇ ವಿಶ್ವನಾಥನಿಗೆ ಪಿತ್ತ ಸರಕ್ಕನೆ ನೆತ್ತಿಗೇರಿತ್ತು. 'ಎಲ್ಲ ಗೊತ್ತರೀ, ಆ ದಂಪತಿ ನಿಮ್ಮವರೇ, ನಮ್ಮ ಮುಂದೆ ನಾಟಕ ಮಾಡಬೇಡಿ, ಸೈಟಂತೆ, ಚೆಕ್ ಅಂತೆ, ನಮಗೆ ಸುಮ್ಮನೇ ಮೋಸದ ಜಾಲ ಹೆಣೆಯಲು ನಿಮ್ಮದೇ ಕುತಂತ್ರ ಇದು' ಅಂತೆಲ್ಲ ಕೂಗಾಡಹತ್ತಿದ ವಿಶ್ವನಾಥ.

'ಹಾಗಲ್ಲ ಸರ್' ಅನ್ನುತ್ತ ಮೂರ್ನಾಲ್ಕು ಹುಡುಗರು ವಿಶ್ವನಾಥನನ್ನು ಸಂಭಾಳಿಸಲು ಬಂದಿದ್ದರು. ಬೆಂಗಳೂರಿನಲ್ಲಿ ಬೇಡವಾದರೆ, ಇಲ್ಲಿಯೇ ಯಶಸ್ವಿ ಡೆವಲಪರ್ಸ್ ಅನ್ನುವ ಕಂಪೆನಿ ಧಾರವಾಡದಲ್ಲಿ ಹೈಕೋರ್ಟ ಹತ್ತಿರ ಸೈಟು ರೆಡಿ ಮಾಡುತ್ತಿದೆ, ಅದನ್ನಾದರೂ ನೋಡಿ' ಅಂದದ್ದೇ ಅಷ್ಟು ಹೊತ್ತು ಸುಮ್ಮನೇ ಕೂತ ಮಂಜುಳಾ 'ಹೌದೇ? ಇಲ್ಲಿಯೇ ಇದೆಯೇ?' ಎನ್ನುತ್ತ ಅವರಂದದ್ದನ್ನು ಆಸಕ್ತಿಯಿಂದ ಕೇಳುತ್ತ ವಿಶ್ವನಾಥನಿಗೆ 'ರೀ, ಇಲ್ಲೇ ಇದೆಯಂತೆ, ಇದಾದರೂ ನೋಡಬಾರದೇ?' ಅಂತ ರಮಿಸಿದ್ದೇ ತಡ ವಿಶ್ವನಾಥ 'ಹೆಂಡಿರನ್ನು ಬೇರೆ ಜೊತೆಯಲ್ಲಿ ಕರೆಸುತ್ತೀರಿ, ನಿಮ್ಮ ಮೋಸ ಗೊತ್ತಾಗದೇ ಅವರು ಒತ್ತಾಯ ಮಾಡಲಿ ಎಂಬುದಕ್ಕಾಗಿ, ಗಂಡಹೆಂಡಿರ ನಡುವೆ ಜಗಳ ಹಚ್ಚಿಡುವ ರೀತಿಯಲ್ರಿ ನಿಮ್ದು, ನೀವು ಉದ್ಧಾರವಾಗುವುದಿಲ್ಲ' ಎಂದು ದೊಡ್ಡದಾಗೇ ಬಾಯಿ ತೆಗೆದ. ಅದನ್ನೂ ಮೀರಿ ಅವರೆಲ್ಲ ಸುತ್ತುವರೆದು ಒಮ್ಮೆಲೇ 'ನಿಮ್ಮ ದುಡ್ಡು ಬೇಡ, ಇಲ್ಲಿ ಮೋಸ ಗೀಸ ಏನೂ ಇಲ್ಲ, ಈಗ ಕೇವಲ ಹತ್ತು ಸಾವಿರ ಕೊಡಿ ಅಷ್ಟೇ' ಎಂದರು. 'ಒಂದು ನೈಯಾ ಪೈಸೆಯೂ ಕೊಡುವುದಿಲ್ಲ.' 'ಹಾಗೇಕೆ ಬೀಪಿ ಹೆಚ್ಚಿಸಿಕೊಂಡಿದ್ದೀರಿ? ನಾವು ನಿಮ್ಮ ಒಳ್ಳೆಯದಕ್ಕೇ ಹೇಳಿದ್ದು.' 'ನಮ್ಮ ಸಂಬಂಧಗಳೇ ನೀವು? ನಮ್ಮ ಒಳ್ಳೆಯದನ್ನು ಬಯಸಲಿಕ್ಕೆ?' 'ಅಯ್ಯೋ ಒಳ್ಳೆಯದು ಬಯಸಲು ಸಂಬಂಧಿಗಳೇ ಆಗಬೇಕೆ?' 'ನೊಡಿ ನಿಮ್ಮ ಮಿಸೆಸ್‌ಗೆ ಮನಸ್ಸಿದೆ, ಕಮೀಟ್ ಆಗಿಬಿಡಿ.'

**ಹೆಂಡತಿಯನ್ನು ಜಗ್ಗಿಕೊಂಡು ಹೊರಬಂದ ವಿಶ್ವನಾಥ ಮೆಟ್ಟಿಲಿಳಿಯುತ್ತಿದ್ದಂತೆಯೇ ಗಿಫ್ಟ್ ಪ್ಯಾಕ್ ಒಡೆದು ನೋಡಿದ, ಆರು ಗಾಜಿನ ಬೌಲುಗಳಿದ್ದವು. 'ಇದಾದರೂ ಯಾತಕ್ಕಾದರೂ ಬಳಕೆಯಾಗ್ತದೆ ಬಾ, ಇಷ್ಟು ಹೊತ್ತು ನಮ್ಮ ಟೈಮ್ ವೇಸ್ಟ್ ಮಾಡಿದ್ದಕ್ಕೆ ಇದು ಗಿಫ್ಟ್ ಅಂತ ತಿಳಿಯುವ, ಗೆಸ್ಟ್ ಬಂದಾಗ ಜಾಮೂನು ಮಾಡಿದರೆ ಇದರಲ್ಲೇ ಹಾಕಿಕೊಡುವಿಯಂತೆ...'**

ವಿಶ್ವನಾಥನಿಗೆ ಸಹನೆಯ ಕಟ್ಟೆಯೊಡಯತೊಡಗಿತ್ತು. 'ನೀವು ನಮ್ಮನ್ನು ಕರೆಸಿದ್ದು ನಿಮ್ಮ ಫೋನ್ ನಂಬರಿಗೆ ಲಾಟರಿ ಹತ್ತಿದೆ, ಬಹುಮಾನ ಗಳಿಸಿದ್ದೀರಿ ಬನ್ನಿ ಅಂತ. ಸುಮ್ಮನೇ ನಮ್ಮ ಬಹುಮಾನ ನಮಗೆ ಕೊಟ್ಟು ನಂತರ ಮಾತಾಡಿ. ನಾವು ನಮ್ಮ ಕೆಲಸ ಬೊಗಸೆ ಎಲ್ಲ ಬಿಟ್ಟು ಇಲ್ಲಿ ಬಂದಿದ್ದೇವೆ, ಕಂಪ್ಲೇಂಟು ಕೊಡ್ತೇನೆ ಕಂಪ್ಲೇಂಟು' ಅಂತ ಎದ್ದು ನಿಂತು ದೊಡ್ಡ ದನಿಯಲ್ಲಿ